# ವ್ರತಶೀಲ

ವ್ರತ ಎಂಬುದು ಸಂಸ್ಕೃತ ಪದ. ಇದಕ್ಕೆ ನಿಯಮ, ಕಟ್ಟಳೆ, ವಿಧಿ ಎಂಬ ಅರ್ಥಗಳಿವೆ. 'ಬ್ರತ' ಎಂದು ತದ್ಭವರೂಪವಾಗಿಯೂ ಕನ್ನಡದಲ್ಲಿ ಬಳಕೆಯಾಗುವುದುಂಟು. ಸಾಮಾಜಿಕರೂ ಧಾರ್ಮಿಕರೂ ಅನೇಕ ವ್ರತಗಳನ್ನು ಮಾಡುತ್ತಾರೆ. ನಮ್ಮಲ್ಲಿ ಸತ್ಯನಾರಾಯಣವ್ರತ, ಲಕ್ಷ್ಮೀವ್ರತ – ಹೀಗೆ ಹಲವು ವ್ರತಗಳಿವೆ. ಇದು ಭಕ್ತನಿಗೂ ಭಗವಂತನಿಗೂ ನಡುವೆ ಜರುಗುವ ಒಂದು ಬಗೆಯ ಧಾರ್ಮಿಕ ಕ್ರಿಯಾವಿಧಿ. ಇದು ಮೂಲದಲ್ಲಿ ಸಾಧಕನೊಬ್ಬ ತನ್ನ ಆಧ್ಯಾತ್ಮಿಕ ಪ್ರಗತಿಗೆ ಸಹಾಯವಾಗುವಂತೆ ಸಾಧನೆಯನ್ನು ಮಾಡುತ್ತೇನೆಂದು ಮಾನಸಿಕವಾಗಿ ಸಂಕಲ್ಪಿಸುವ ಕ್ರಿಯೆಯಾಗಿತ್ತು. ಇಂದು ಕೇವಲ ಸಾಮಾಜಿಕ ಕ್ರಿಯೆಯಾಗಿಯೇ ಉಳಿದುಕೊಂಡಿದೆ. ವ್ರತವನ್ನು ಆಚರಿಸುವವರು ಆಹಾರದ ವಿಷಯದಲ್ಲಿ ಕಟ್ಟುಕಟ್ಟಳೆಗಳನ್ನು ಇಟ್ಟುಕೊಳ್ಳುವುದುಂಟು. ವ್ರತವನ್ನು ಆಚರಿಸುವವರು ಉಪವಾಸ ಮಾಡುವುದು ಅಗತ್ಯವಿಧಿಗಳಲ್ಲಿ ಒಂದು! ಆದರೆ, ಉಪವಾಸ ಎಂದು ಹೇಳಿ ಅನ್ನ–ರೊಟ್ಟಿಗಳನ್ನು ಬಿಟ್ಟು, ಇತರ ತಿಂಡಿ–ತಿನಿಸುಗಳನ್ನು ತಿಂದರೆ ಉಪವಾಸ ಎಂದು ಹೇಗೆ ಕರೆಯುವುದು? ಉಪವಾಸದ ಹಿಂದಿರುವ ಉದ್ದೇಶವನ್ನು ನಾವು ಗಮನಿಸಬೇಕು. ಅದು ಆಸೆಪಡುತ್ತಿರುವ ಮನಸ್ಸನ್ನು ಸಂಯಮದಲ್ಲಿ ಇಟ್ಟುಕೊಳ್ಳುವುದು. ದೈವ ಚಿಂತನೆಯಲ್ಲಿ ತೊಡಗಿಕೊಳ್ಳುವುದು ವ್ರತದ ಹಿಂದಿರುವ ಪ್ರಮುಖ ಉದ್ದೇಶ.

ಬೌದ್ಧ, ಜೈನ, ಶೈವ, ಶಾಕ್ತ ಮುಂತಾದ ಎಲ್ಲಾ ಸಂಪ್ರದಾಯಗಳಲ್ಲೂ ವ್ರತಗಳು ಉಂಟು. ಬೌದ್ಧ ಭಿಕ್ಕುಗಳು ಮೂರು ಮನೆಗಳಲ್ಲಿ ಮಾತ್ರ ಭಿಕ್ಷೆ ಬೇಡುವುದು ಭಿಕ್ಕುಗಳ ವ್ರತ. ಶೈವ ಸನ್ಯಾಸಿಗಳಲ್ಲಿ ಮೂರು ಹಿಡಿಯಷ್ಟು ಮಾತ್ರ ಅನ್ನವನ್ನು ಸ್ವೀಕರಿಸುವುದು ಕಟ್ಟಳೆಯಾಗಿತ್ತು. ಇದೇ ಬಗೆಯ ಹತ್ತಾರು ಕಟ್ಟಳೆ, ವಿಧಿ, ನಿಯಮ, ನೇಮ ನೋಂಪಿಗಳುಂಟು. ಇಂಥ ವ್ರತಗಳ ಮೂಲಕ ನಮ್ಮ ಸ್ವಾರ್ಥ ಉದ್ದೇಶಗಳು ಕಡಿಮೆ ಆಗುತ್ತವೆ. ಆಗ ನಮ್ಮ ಮನಸ್ಸು ಅಥವಾ ಆತ್ಮ ಶುದ್ಧವಾಗುತ್ತ ಹೋಗುತ್ತದೆ. ಕಾಮ ಕ್ರೋಧಾದಿಗಳು ಇಲ್ಲದ ಶುದ್ಧ ಆತ್ಮವು ಪರಮಾತ್ಮನ ವಾಸಕ್ಕೆ ಯೋಗ್ಯವಾಗುತ್ತದೆ. ನೀವು ವ್ರತ ಎಂದು ಹೇಳಿಕೊಂಡ ಮಾತ್ರಕ್ಕೆ ಅದು ವ್ರತ ಎನಿಸಿಕೊಳ್ಳುವುದಿಲ್ಲ. ಹಿರಿಯರನ್ನು, ಸಾಧು–ಸಂತರನ್ನು, ದೈವೀಭಾವನೆಗಳನ್ನು ದೂಷಿಸದಿರುವುದೇ ನಿಜವಾದ ವ್ರತ. ಪ್ರತಿಯೊಂದು ಸಂಪ್ರದಾಯಗಳಲ್ಲಿ ವಿಶಿಷ್ಟ ಬಗೆಯ ವ್ರತಗಳು ಇದ್ದೇ ಇರುತ್ತವೆ. ಆ ವ್ರತಗಳಲ್ಲೂ ಸಗುಣೋಪಾಸನೆಯ ವ್ರತಗಳು ಕೆಲವಿವೆ; ನಿರ್ಗುಣೋಪಾಸನೆಗೆ ಸಂಬಂಧಿಸಿದ ವ್ರತಗಳೂ ಇವೆ. ಒಂದು ದಿನ ಉಪವಾಸವಿದ್ದು, ಧೂಪ–ದೀಪಗಳಿಂದ ದೇವರನ್ನು ಅಲಂಕಾರ ಮಾಡಿ ವ್ರತವನ್ನು ಆಚರಿಸಿದರೆ ಅದು ಸಗುಣೋಪಾಸನೆಯ ವ್ರತ. ಇನ್ನು ಮೌನ–ಧ್ಯಾನದಲ್ಲೇ ಆತ್ಮಶೋಧ ಮಾಡಿಕೊಳ್ಳುವ ಇನ್ನೊಂದು ಬಗೆಯ ಕ್ರಮವುಂಟು. ನಾವು ಇದನ್ನು ನಿರ್ಗುಣೋಪಾಸನೆ ಎಂದು ಕರೆಯಬಹುದು.

ನಾವು ತುಸು ಸಂಸಾರದ ದಿಕ್ಕುದೆಸೆಗಳ ಕಡೆ ನೋಡೋಣ. ಸಮಾಜದಲ್ಲಿರುವವರು ಅನೇಕ ಬಗೆಯ ವ್ರತಗಳನ್ನು ಆಚರಿಸುತ್ತಾರೆ. ವಾರದ ವ್ರತ ಉಂಟು. ಬೇರೆ ಬೇರೆ ಕಾಲಗಳಲ್ಲಿ ಮಾಡುವ ವ್ರತವೂ ಉಂಟು. ನಿರ್ದಿಷ್ಟ ದಿನಗಳಲ್ಲಿ ಆಚರಿಸುವ ವ್ರತಗಳೂ ಉಂಟಷ್ಟೆ? ಕೆಲವರು ಸೋಮವಾರ ಊಟ ಮಾಡುವುದಿಲ್ಲ. ಇದು ಶಿವನ ವಾರ. ಆ ದಿನ ಎತ್ತುಗಳನ್ನು ಬಂಡಿಗೂ ವ್ಯವಸಾಯಕ್ಕೂ ಹೂಡುವುದಿಲ್ಲ. ಕೆಲವರು ಒಂದೇ ಹೊತ್ತು ಊಟ ಮಾಡುವ ವ್ರತವನ್ನು ಹೊತ್ತಿರುತ್ತಾರೆ. ಚಳಿಗಾಲದಲ್ಲಿ ಸ್ನಾನಮಾಡಿ ಒದ್ದೆ ಬಟ್ಟೆಯಲ್ಲಿ ಅಡುಗೆ ಮಾಡುವುದು ಮತ್ತೆ ಕೆಲವರ ವ್ರತವಾಗಿರುತ್ತದೆ. ಒಂದೊಂದು ತಿಂಗಳು ಕೆಲವು ಬಗೆಯ ಪದಾರ್ಥಗಳನ್ನು ತಿನ್ನದೆ ಬಿಡುವುದೂ ಒಂದು ಬಗೆಯ ವ್ರತವೇ. ಕೆಲವರು ಭಾನುವಾರ ಮಾತನಾಡದೆ ಮೌನವಾಗಿರುವ ವ್ರತಿಗರೂ ನಮ್ಮಲ್ಲಿ ಉಂಟು. ಇನ್ನು ಅರ್ಥರಹಿತ, ಉದ್ದೇಶರಹಿತ ವ್ರತಸ್ಥರೂ ಉಂಟು.

ವ್ರತಂಗಳನ್ನು ಆಚರಿಸುವುದು ಮುಖ್ಯವಾಗಿ ಎರಡು ಉದ್ದೇಶಗಳೆಂದು ನಾವು ತಿಳಿಯಬೇಕು. ಮೊದಲನೆಯದು ಇಂದ್ರಿಯ ನಿಗ್ರಹ. ಎರಡನೆಯದು ಆಧ್ಯಾತ್ಮಿಕ ಪ್ರಗತಿ. ಮನುಷ್ಯನು ವಿಷಯ ಲೋಲುಪ್ತಿಯಲ್ಲಿ ಮುಳುಗಿ ತಮ್ಮ ಆಸೆಗಳನ್ನು ಕಡಿಮೆ ಮಾಡಿಕೊಳ್ಳಬೇಕೆನ್ನುವವರು ವಾರದಲ್ಲೊಂದು ದಿನ ಮದ್ಯಪಾನ ಮಾಡದಿರುವುದು ಅಥವಾ ಮಾಂಸಭಕ್ಷಣೆ ಮಾಡುವುದಿಲ್ಲ ಎಂಬುದು ಇಂದ್ರಿಯ ನಿಗ್ರಹಕ್ಕೆ ಸೇರಿದ್ದು. ಆದರೆ, ಒಂದೆರಡು ಬಾರಿ ಆಚರಿಸಿ, ಏಳು ದಿನಗಳಿಗೆ ವಿಸ್ತರಿಸಿದರೆ ಅದನ್ನು ವ್ರತಗೇಡಿ ಎನ್ನಬೇಕಾಗುತ್ತದೆ. ಆದರೆ, ವ್ರತಗಳ ಮೂಲಕ ಇಂದ್ರಿಯ ನಿಗ್ರಹ ಮಾಡಲು ಸಾಧ್ಯವಿದೆ; ಐದು ಕರ್ಮೇಂದ್ರಿಯಗಳು ನಮ್ಮ ಕೈಗೆ ಬಂದಂತಾಗುತ್ತವೆ. ಇಂದ್ರಿಯ ನಿಗ್ರಹವು ಆಧ್ಯಾತ್ಮಿಕ ಪ್ರಗತಿಗೆ ಒಂದು ಬಗೆಯ ಹೆದ್ದಾರಿಯೇ ಹೌದು! ಯಾರು ಇಂದ್ರಿಯ ನಿಗ್ರಹ ಮಾಡುವುದಿಲ್ಲವೋ ಅವರು ಆಧ್ಯಾತ್ಮಿಕ ಪ್ರಗತಿಯಲ್ಲಿ ಸಾಗಲಾರರು. ಯಾರು ಆಧ್ಯಾತ್ಮಿಕ ಪ್ರಗತಿಯತ್ತ ಸಾಗುವುದಿಲ್ಲವೋ ಅವರಿಗೆ ಆತ್ಮಶುದ್ಧಿ ಸಾಧ್ಯವಾಗಲಾರದು.

ಅನೇಕರು ವ್ರತಗಳ ಹೆಸರಿನಲ್ಲಿ ಅರ್ಥವಿಲ್ಲದ ಆಚರಣೆಗಳನ್ನು ಇಟ್ಟುಕೊಂಡಿರುತ್ತಾರೆ. ಕೆಲವರು ಭವಿಗಳ ಮನೆಯಲ್ಲಿ ಊಟ ಮಾಡುವುದಿಲ್ಲ. ಆದರೆ, ಅವರು ಕೊಟ್ಟ ಪಡಿಯನ್ನು ಸ್ವೀಕರಿಸಿದರೆ ದೋಷವಿಲ್ಲ. ಉಪ್ಪನ್ನು ತಿನ್ನುವುದಿಲ್ಲ. ಪೂಜೆಗೆ ನಲ್ಲಿಯ ನೀರನ್ನು ಬಳಸುವುದಿಲ್ಲ. ದೈವಪ್ರತಿಮೆಗೆ ಹಸುವಿನ ಹಾಲನ್ನು ಮಾತ್ರ ಬಳಸುವುದು. ಇಂಥವುಗಳ ಬಗೆಗೆ ವಚನಕಾರರು ಟೀಕಿಸಿದ್ದಾರೆ. ಅವರ ಪ್ರಕಾರ ಪರದ್ರವ್ಯ, ಪರಸ್ತ್ರೀ, ಇವುಗಳು ಮೇಲೆ ನಮ್ಮದಲ್ಲ ಎಂಬ ವ್ರತವನ್ನು ಇಟ್ಟುಕೊಳ್ಳಬೇಕು. ಹುಸಿ, ಕೊಲೆ, ಕಳವು ಮಾಡುವುದನ್ನು ಬಿಟ್ಟು ಬಿಡುತ್ತೇವೆಂದು ವ್ರತ ಮಾಡಬೇಕೇ ಹೊರತು ಅರ್ಥರಹಿತ ವ್ರತಾಚರಣೆಯಿಂದ ಯಾವ ಉದ್ದೇಶವೂ ಈಡೇರುವುದಿಲ್ಲ. ಶರಣರು ವ್ರತವನ್ನು ನೇಮ (ನಿಯಮ) ಕುರಿತು ಆಡಿರುವ ಕೆಲವೊಂದು ಮಾತುಗಳು ಹೀಗಿವೆ: ಬಂದುದ ಕೈಕೊಳ್ಳಬಲ್ಲಡೆ ನೇಮ; ವಂಚನೆಯ ಮಾಡದಿಪ್ಪುದೇ ನೇಮ, ವ್ರತವನ್ನಾಶ್ರಯಿಸಿದ ಮೇಲೆ ಹುಸಿ, ಕೊಲೆ, ಕಳವು, ಪರದಾರ ಮಾಡುವನ್ನಬರ ವ್ರತಸ್ಥನಲ್ಲದೆ ನೇಮಕ್ಕೆ ಸಲ್ಲ. ಈ ಮಾತುಗಳನ್ನು ನಾವು ಧ್ಯಾನಿಸಿ ನೋಡಿದರೆ ನಿಜವಾದ ವ್ರತಶೀಲಗಳು ಆಧ್ಯಾತ್ಮಿಕ ಜೀವನಕ್ಕೆ ಬಹಳ ಅಗತ್ಯ. ಅವುಗಳಿಲ್ಲದೆ ಆತ್ಮಶುದ್ಧಿಯಿಲ್ಲ, ದುಷ್ಟ ವ್ರತಾಚರಣೆಗಳನ್ನು ಬಿಟ್ಟು, ಶಿಷ್ಟವ್ರತಾಚರಣೆಗಳ ಮೂಲಕ ವ್ರತಕ್ಕೆ ಮೌಲ್ಯ ತಂದುಕೊಡುವುದು ನಿಜವಾದ ವ್ರತಸ್ಥನ ಕ್ರಿಯಾಕಲ್ಪವೆಂದು ನಾವು ಭಾವಿಸಬೇಕು. ಅದು ಸಾಧ್ಯವಾದರೆ, ವ್ರತವೆನಿಸಿಕೊಳ್ಳುತ್ತದೆ. ಅದಿಲ್ಲದಿದ್ದರೆ ಅವ್ರತವೇ ಸರಿ!

**■ ಪುರಂಜೀವಿ**

## ಮಾತೇ ಮುತ್ತು

- ನಾಲಗೆ ಆತ್ಮದ ವೈರಿ. ತುಟಿಗಳು ಸುಮ್ಮನಿದ್ದಾಗ ಹೃದಯಕ್ಕೆ ನೂರಾರು ನಾಲಗೆಗಳಿರುತ್ತವೆ.

  –ರೂಮಿ

- ಸ್ಥಿರ ಚಿತ್ತವೇಕಿನ್ನು ಬರಲಿಲ್ಲ, ತಾಯೇ? ಚಿತ್ತವನು ಮುತ್ತಿರುವುದೇಕಿನ್ನು ಮಾಯೆ?

  –ಕುವೆಂಪು

- ಹೊಟ್ಟೆಯ ಹಸಿವನ್ನು ಹೇಗಾದರೂ ನೀಗಿಸಬಹುದು, ಆದರೆ ಪ್ರೀತಿಯ ಹಸಿವನ್ನು ನೀಗಿಸುವುದು ಕಷ್ಟ.

  –ಮದರ್ ತೆರೇಸಾ

- ಅತ್ಯುತ್ತಮ ಗೆಳೆಯ ಮತ್ತು ಅತ್ಯಂತ ಕೆಟ್ಟ ವೈರಿ ಇಬ್ಬರೂ ನಿಮ್ಮೊಳಗೇ ಇದ್ದಾರೆ.

  –ಇಂಗ್ಲಿಷ್ ಗಾದೆ

- ಅತ್ಯುತ್ತಮ ಆಡಳಿತ ಇರುವ ದೇಶದಲ್ಲಿ ಬಡತನ ಎನ್ನುವುದು ನಾಚಿಕೆಯ ಸಂಗತಿ. ಕೆಟ್ಟ ಆಡಳಿತ ಇರುವ ದೇಶದಲ್ಲಿ ಶ್ರೀಮಂತಿಕೆ ಎನ್ನುವುದು ನಾಚಿಕೆಯ ಸಂಗತಿ.

  –ಕನ್‌ಫ್ಯೂಶಿಯಸ್

- ಚಿತ್ರವೆಂದರೆ ಮೌನವಾಗಿರುವ ಕಾವ್ಯ. ಕಾವ್ಯವೆಂದರೆ ಮಾತನಾಡುವ ಚಿತ್ರ.

  –ಪ್ಲುಟಾರ್ಕ್

- ಒಂದೋ ಓದಲು ಅರ್ಹವಾದದ್ದನ್ನು ಬರೆಯಿರಿ. ಇಲ್ಲವೇ ಬರೆಯುವುದಕ್ಕೆ ಅರ್ಹವಾದುದನ್ನು ಮಾಡಿರಿ.

  –ಬೆಂಜಮಿನ್ ಫ್ರಾಂಕ್ಲಿನ್

- ಸಂಕಷ್ಟ ಇಲ್ಲದಿದ್ದರೆ ನಮ್ಮ ತಪ್ಪುಗಳಿಂದ ನಾವು ಪಾಠ ಕಲಿಯುವುದಿಲ್ಲ.

  –ಏಂಜಲಿನಾ ಜೋಲಿ